Misc.534/19
PW-01

ಈ ದಿನ ದಿ.11-07-2023 ರಂದು ಸಾಕ್ಷಿ ಹಾಜರಿದ್ದು, ಪ್ರಮಾಣವಚನ ಮಾಡಿಸಲಾಯಿತು.

<u>ಪಾಟೀಸವಾಲುಃ-</u> ಎದುರುದಾರರಪರ ಶ್ರೀ ಎನ್ ಕೆ ವಕೀಲರಿಂದ.

ವಿದ್ಯುತ್ ಲೈನ್ ಹಾಕಿದ ಸಂದರ್ಭದಲ್ಲಿ ನನ್ನ ಜಮೀನಿನಲ್ಲಿ ಕಬ್ಬು ಹಾಕಿದ್ದೆ. ನನ್ನ ಜಮೀನು ಖುಶ್ಕಿ ಜಮೀನು ಆಗಿತ್ತು, ಆ ನಂತರ ಬೋರ್ ಹಾಕಿಸಿ ಕಬ್ಬು ಬೆಳೆದಿದ್ದೆ. ಮೊದಲಿನಿಂದಲೂ ನನ್ನ ಜಮೀನಿನಲ್ಲಿ ವಿದ್ಯುತ್ ಲೈನ್ ಇತ್ತು ಎನ್ನುವುದು ಸರಿ. ಇಲ್ಲಿಗೆ ಆರು ವರ್ಷದ ಹಿಂದೆ ಕೇವಲ ಲೈನನ್ನು ದುರಸ್ತಿ ಮಾತ್ರ ಮಾಡಿದ್ದಾರೆ ಎಂದರೆ ಸರಿ. ಎಷ್ಟು ವಿಸ್ತೀರ್ಣದಲ್ಲಿ ಲೈನ್ ಎಳೆದಿದ್ದಾರೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಕಂಬ ಇರುವ ಬಗ್ಗೆ ದಾಖಲೆಯಾಗಲಿ ಫೋಟೋವಾಗಲಿ ಹಾಕಿಲ್ಲ. ವಿದುತ್ ಲೈನ್ ಎಳೆದಾಗ ನಾನು ಆಕ್ಷೇಪಣೆ ಮಾಡಿದ್ದೆ. ಆದರೆ ಅವರು ಪರಿಹಾರವನ್ನು ನ್ಯಾಯಾಲಯದಿಂದ ಪಡೆಯಿರಿ ಎಂದು ಹೇಳಿದ್ದರು. ವಿದ್ಯುತ್ ಲೈನ್ ಕೆಳಗೆ ಕಬ್ಬು ಬೆಳೆಯಲು ತೊಂದರೆ ಇಲ್ಲ ಎನ್ನುವುದು ಸರಿಯಲ್ಲ. ಇಲ್ಲಿಯವರೆಗೆ ನನಗೆ ಯಾವುದೇ ಪರಿಹಾರ ನೀಡಿಲ್ಲ. ಬೆಳೆ ನಷ್ಟವಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಜಮೀನಿನ ಮೌಲ್ಯ ಕಡಿಮೆಯಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ವಿದುತ್ ಲೈನ್ ಎಳೆದಿರುವುದರಿಂದ ನನಗೆ ಯಾವುದೇ ತೊಂದರೆಯಾಗುತ್ತಿಲ್ಲ ಎನ್ನುವುದು ಸರಿಯಲ್ಲ. ಕಾಲ ಪರಿಮಿತಿ ಮೀರಿ ಕೇಸ್ ಹಾಕಿದ್ದೇನೆ ಎನ್ನುವುದು ಸರಿಯಲ್ಲ. ಕಾಲ ವಿಳಂಬವಾಗಿ ಕೇಸು ಹಾಕಿರುವುದರಿಂದ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎನ್ನುವುದು ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.